# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 255
2. ಸದಸ್ಯರ ಹೆಸರು : ಶ್ರೀ ಪಿ. ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು
4. ಉತ್ತರಿಸುವ ದಿನಾಂಕ : 12-08-2025

| ಕ್ರ. ಸಂ. | ವಿಷಯ | ಉತ್ತರ |
|---|---|---|
| (ಅ) | ಬಾಗಲಕೋಟೆ ಜಿಲ್ಲೆಯಲ್ಲಿ ಇತ್ತೀಚೆಗೆ ದಾಳಿಂಬೆ ಬೆಳೆಗೆ ದುಂಡಾಣು ರೋಗ, ಕೊಳೆರೋಗ, ಸೊರಗು ರೋಗ, ಕಾಂಡಕೊರಕ ಕೀಟದ ರೋಗಗಳಿಂದ ರೈತರು ಹಾನಿ ಅನುಭವಿಸುತ್ತಿರುವ ಗಂಭೀರ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಷ್ಟಗೊಂಡ ದಾಳಿಂಬೆ ಬೆಳೆಗಾರರಿಗೆ ವಿಶೇಷ ಪ್ಯಾಕೇಜನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆಯೇ: | ಸರ್ಕಾರದ ಗಮನಕ್ಕೆ ಬಂದಿದೆ.<br><br>ಪ್ರಮುಖವಾಗಿ ದುಂಡಾಣು ರೋಗ, ಕೊಳೆರೋಗ, ಸೊರಗು ರೋಗ ಹಾಗೂ ಕಾಂಡಕೊರಕ ಕೀಟಗಳಿಂದ ಅಂದಾಜು 1350 ಹೆಕ್ಟೇರ್ ಪ್ರದೇಶದಲ್ಲಿ ದಾಳಿಂಬೆ ಬೆಳೆಗೆ ಹಾನಿಯಾಗಿರುತ್ತದೆ. ವಯಸ್ಸಾದ ಗಿಡಗಳಲ್ಲಿ ಮತ್ತು ಸಮಗ್ರ ಕೃಷಿ ನಿರ್ವಹಣಾ ಪದ್ಧತಿಗಳನ್ನು ಸಕಾಲದಲ್ಲಿ ಅಳವಡಿಸದೆ ಇರುವ ತಾಕುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗಿರುತ್ತದೆ.<br><br>ದಾಳಿಂಬೆ ಬೆಳೆಗಾರರ ಹಿತದೃಷ್ಟಿಯಿಂದ ಕೆಳಕಾಣಿಸಿದಂತೆ ಕ್ರಮಕೈಗೊಳ್ಳಲಾಗಿದೆ.<br>1. ಈ ಬೆಳೆಗೆ ಬೀಳುವ ರೋಗ ಮತ್ತು ಕೀಟಗಳ ವಿವರಗಳನ್ನು ಹಾಗೂ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಮಾರ್ಗೋಪಾಯಗಳನ್ನು ರೈತರಿಗೆ ತಲುಪಿಸಲು National Research Center on Pomegranate, Solapur ಹಾಗೂ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ವಿಜ್ಞಾನಿಗಳ ತಂಡವು ದಾಳಿಂಬೆ ಬೆಳೆಯುವ ತೋಟಗಳಿಗೆ ಭೇಟಿ ನೀಡಿ ರೈತರಿಗೆ ಸಲಹೆಗಳನ್ನು ನೀಡಿದೆ.<br>2. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಸಮಗ್ರ ಕೀಟ-ರೋಗ ನಿರ್ವಹಣೆ/ಸಮಗ್ರ ಪೋಷಕಾಂಶ ನಿರ್ವಹಣೆಯಡಿ ಜೈವಿಕ ಕೀಟನಾಶಕ/ಪೋಷಕಾಂಶಗಳು, ಜೈವಿಕ ಗೊಬ್ಬರ, ಸಾವಯವ ಗೊಬ್ಬರ, ಲಘು ಪೋಷಕಾಂಶ, Pheromone traps ಗಳಿಗೆ ರೈತರಿಗೆ ಸಹಾಯಧನ ನೀಡಲಾಗುತ್ತಿದೆ.<br>3. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಪಕ್ಷಿಗಳಿಂದ ಹಾನಿ ಉಂಟಾಗುವುದನ್ನು ತಪ್ಪಿಸಲು ನಿರೋಧಕ |

| | | |
|---|---|---|
| | | ಬಲೆ ಬಳಸಲು ಸಹಾಯಧನ ನೀಡಲಾಗುತ್ತಿದೆ.<br>4. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ದಾಳಿಂಬೆ ಬೆಳೆಗೆ ಸಹಾಯಧನ ನೀಡಲಾಗುತ್ತಿದೆ.<br>5. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ತೋಟಗಾರಿಕೆ ಬೆಳೆಗಳಲ್ಲಿ ಗುಣಮಟ್ಟದ ಉತ್ಪಾದನೆಗೆ ವಿಶೇಷ ಉತ್ತೇಜನ ಕಾರ್ಯಕ್ರಮದಡಿ ನೀರಿನಲ್ಲಿ ಕರಗುವ ರಸಗೊಬ್ಬರ, ಲಘು ಪೋಷಕಾಂಶಗಳ ಮಿಶ್ರಣ ಮತ್ತು ಬೆಳೆ ಸ್ಪೆಷಲ್, ಬೆಳೆ/ಹಣ್ಣು/ಹೂ ಹೊದಿಕೆಗಳಿಗೆ, ಮೋಹಕ/ಜಿಗಟಾದ/ಸೌರಶಕ್ತಿ ಆಧಾರಿತ ಕೃತಕ ಬುದ್ಧಿಯ ಕೀಟ ನಿಯಂತ್ರಕ ಬಲೆಗಳಿಗೆ, ಸೋಲಾರ್ ಪಂಪ್ ಸೆಟ್ ಗಳಿಗೆ ಹಾಗೂ ಸ್ವಯಂ ಚಾಲಿತ ಹವಾಮಾನ ಮುನ್ಸೂಚನಾ ಘಟಕಗಳಿಗೆ ಸಹಾಯಧನ ನೀಡಲಾಗಿರುತ್ತದೆ.<br>6. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕೊಯ್ಲೋತ್ತರ ನಿರ್ವಹಣೆ ಕಾರ್ಯಕ್ರಮದಡಿ ಪ್ಲಾಸ್ಟಿಕ್ ಕ್ರೇಟ್ಸ್/ಕರೋಗೆಟೆಡ್ ಫೈಬರ್ ಬಾಕ್ಸ್ ಹಾಗೂ ಫಾರ್ಮ್ ಗೇಟ್ ಗಳಿಗೆ (Farm Gate) ಸಹಾಯಧನ ನೀಡಲಾಗುತ್ತಿದೆ.<br>7. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಆವರಣದಲ್ಲಿ ದಾಳಿಂಬೆ ಉತ್ಕೃಷ್ಠ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ದಾಳಿಂಬೆ ಬೆಳೆಗಾರರಿಗೆ ತರಬೇತಿ ನೀಡಲಾಗುತ್ತಿದೆ.<br>8. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯು ಅಭಿವೃದ್ಧಿ ಪಡಿಸಲಾದ "ದಾರಕ್ಷಕ" ಮತ್ತು "ಟ್ರೈಕೋಕವಚ" ಎಂಬ ಜೈವಿಕ ಶಿಲೀಂದ್ರ ನಾಶಕಗಳನ್ನು ಬಳಸಲು ರೈತರಿಗೆ ತಿಳಿಸಲಾಗುತ್ತಿದೆ.<br>9. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ದಾಳಿಂಬೆ ತೋಟಗಳಲ್ಲಿ ಸಮರ್ಪಕ ನೀರಿನ ನಿರ್ವಹಣೆ ಮಾಡಲು ಎಲ್ಲಾ ವರ್ಗದ ರೈತರಿಗೆ 02 ಹೆಕ್ಟೇರ್ ವರೆಗೆ ಶೇ.90 ರಷ್ಟು ಮತ್ತು 2.1-05 ಹೆಕ್ಟೇರ್ ವರೆಗೆ ಶೇ.45 ರಷ್ಟು ಸಹಾಯಧನ ನೀಡಲಾಗುತ್ತಿದೆ.<br><br>ದಾಳಿಂಬೆ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ಕಲ್ಪಿಸುವ ಕಾರ್ಯಕ್ರಮ ಇರುವುದಿಲ್ಲ. |

| | | |
|---|---|---|
| | | It has come to the notice of the Government.<br><br>. Mainly bacterial blight, root rot, wilt and shot-hole borer infection has affected nearly 1350 hectare of pomegranate. The infection is severe in old and in orchards where Integrated management practices have not been followed on time.<br><br>The following measures have been taken in the interest of pomegranate growers.<br>1. In order to provide information to the farmers about the pest and disease affected in this crop and measures to be taken to control this, a team of scientists from University of Horticultural Sciences, Bagalkote and National Research Center on Pomegranate, Solapur have visited fields and have given advise to the farmers<br>2. Under Mission of Integrated Development of Horticulture (MIDH) scheme, Integrated pest & disease management/ Integrated nutrient management programme subsidy for Biopesticides, bio fertilizers, organic fertilizers, micronutrients, pheromone traps are provided.<br>3. Under Mission of Integrated Development of Horticulture (MIDH) scheme, subsidy for Anti bird nets is provided in order to prevent bird damage. |

| | | |
|---|---|---|
| | | 4. Under Mission of Integrated Development of Horticulture (MIDH) scheme subsidy for the New Area expansion programme and maintenance for Pomegranate is provided.<br>5. Under Rashtriya Krishi Vikas Yojana (RKVY), Special Incentives for Horticulture crops subsidy has been provided for Water Soluble Fertilizers, Micronutrient Mixture/ Crop specials, Crop / Fruit /Flower cover, Canopy Management, Pheromone/sticky/ Solar powered artificially intelligent pest control traps, Solar pump set and Automated weather stations.<br>6. Under Rashtriya Krishi Vikas Yojana (RKVY), Post-harvest management component subsidies is provided for Plastic crates/Corrugated fiber boxes and Farm gate.<br>7. A Center of Excellence for Pomegranate has been established on the premises of the University of Horticultural Sciences, Bagalkot, and training is being provided to pomegranate growers.<br>8. Farmers are advised to use 'Dharakshak' and 'Trichokavach' – bio fungicide product developed by the University of Horticultural Sciences, Bagalkot.<br>9. Under Pradhana Mantri Krishi Sinchayi Yojana (PMKSY), for all categories of |

| | | |
|---|---|---|
| | | farmer's drip irrigation subsidy is provided at 90% up to 2 hectare and 45% for 2.1-5 hectare.<br>There is no programme for special package to pomegranate growers. |
| (ಆ) | ದಾಳಿಂಬೆ ಜೊತೆಗೆ ಪೇರಲಾ, ದ್ರಾಕ್ಷಿ ಇತ್ಯಾದಿ ಹಣ್ಣುಗಳು ಅಲ್ಲದೇ ಅರಿಸಿನ ಹಾಗೂ ಕೆಂಪುಮೆಣಸಿನ ಕಾಯಿ ಕೂಡಾ ಹೆಚ್ಚಾಗಿ ಬೆಳೆಯುತ್ತಿದ್ದು, ಅವುಗಳಿಗೆ ಯೋಗ್ಯ ದರ ದೊರಕದೆ ಇರುವ ಸಂದರ್ಭಗಳಲ್ಲಿ ಶೇಖರಿಸಿ ಮುಧೋಳ ಹಾಗೂ ಜಮಖಂಡಿ ತಾಲ್ಲೂಕಿನಲ್ಲಿ ಬಹಳ ದಿನಗಳಿಂದ ರೈತರು ಶ್ವೇತ್ಯಾಗಾರಕ್ಕಾಗಿ ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು? | ಸರ್ಕಾರದ ಗಮನಕ್ಕೆ ಬಂದಿದೆ.<br>ಈ ಬಗ್ಗೆ ಕೈಗೊಂಡ ಕ್ರಮವು ಕೆಳಗಿನಂತಿವೆ.<br>1. ಶೈತ್ಯಾಗಾರಗಳನ್ನು ನಿರ್ಮಿಸಲು ರೈತರು/ಉದ್ದಿಮೆದಾರರು/ಕಂಪನಿಗಳಿಗೆ ಸಹಾಯಧನ ನೀಡಲಾಗುತ್ತಿದೆ. ಏಕ ಉತ್ಪನ್ನದ ಶೇಖರಣೆಗೆ ನಿರ್ಮಿಸಲಾಗುವ ಶೀತಲಗೃಹದ ಘಟಕ ವೆಚ್ಚ ಪ್ರತಿ ಮೆಟ್ರಿಕ್ ಟನ್‌ಗೆ ರೂ.9,600/- ಗಳಾಗಿದ್ದು, ಇದರಲ್ಲಿ ಶೇ.35 ರಷ್ಟು ಎಂದರೆ ಪ್ರತಿ ಮೆಟ್ರಿಕ್ ಟನ್ ಗೆ ರೂ.3,360/-ಗಳ ಸಹಾಯಧನ ನೀಡಲಾಗುವುದು ಹಾಗೂ ಬಹು ಉತ್ಪನ್ನದ ಶೇಖರಣೆಗೆ ನಿರ್ಮಿಸಲಾಗುವ ಶೀತಲಗೃಹದ ಘಟಕ ವೆಚ್ಚ ಪ್ರತಿ ಮೆಟ್ರಿಕ್ ಟನ್‌ಗೆ ರೂ.12,000/-ಗಳಾಗಿದ್ದು, ಇದರಲ್ಲಿ ಶೇ.35 ರಷ್ಟು ಎಂದರೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.4,200/-ಗಳ ಸಹಾಯಧನ ನೀಡಲಾಗುವುದು. ಕನಿಷ್ಠ 500 ಮೆಟ್ರಿಕ್ ಟನ್ ನಿಂದ ಗರಿಷ್ಠ 5,000 ಮೆಟ್ರಿಕ್ ಟನ್ ಸಾಮರ್ಥ್ಯದ ಶೈತ್ಯಾಗಾರ ನಿರ್ಮಿಸಲು ಅವಕಾಶವಿರುತ್ತದೆ. ಈ ಶೀತಲಗೃಹದಲ್ಲಿ ಅಧಿಕ ಬೆಳೆ ಬಂದ ಸಂದರ್ಭಗಳಲ್ಲಿ ದಾಳಿಂಬೆ, ದ್ರಾಕ್ಷಿ, ಅರಿಶಿನ, ಕೆಂಪು ಮೆಣಸಿನಕಾಯಿ ಇತ್ಯಾದಿ ಉತ್ಪನ್ನಗಳನ್ನು ಶೇಖರಣೆ ಮಾಡಬಹುದು.<br>2. ಬಾಗಲಕೋಟೆ ಜಿಲ್ಲೆಯಲ್ಲಿ ಪ್ರಸ್ತುತ 5,365 ಮೆಟ್ರಿಕ್ ಟನ್ ಸಾಮರ್ಥ್ಯದ 06 ಶೀತಲಗೃಹಗಳು ಕಾರ್ಯನಿರ್ವಹಿಸುತ್ತಿದ್ದು, ಬಾಗಲಕೋಟೆ ತಾಲ್ಲೂಕಿನಲ್ಲಿ 02 ಹಾಗೂ ಜಮಖಂಡಿ ತಾಲ್ಲೂಕಿನಲ್ಲಿ 04 ಶೀತಲಗೃಹಗಳಿವೆ.<br><br>It has come to the notice of the Government.<br>Following measures have been taken.<br>1. Farmers/entrepreneurs/companies are provided subsidy for construction of cold storage units. For Single commodity cold |

| | | | |
|---|---|---|---|
| | | | store rooms of unit cost of Rs. 9,600/- per metric ton, 35% i.e. Rs. 3,360/- per metric ton subsidy will be provided. For Multi-commodity cold store rooms of unit cost Rs. 12,000/- per metric ton, 35% i.e. Rs. 4200/- per metric ton subsidy will be provided. Minimum capacity of 500 metric ton to a maximum of 5,000 metric ton will be eligible. Produce like pomegranate, grapes, turmeric, red chilly etc. can be stored in these cold storage facility<br>2. At present, there are 06 cold storage units with a capacity of 5,365 MT in Bagalkot district of which 06 units are in Bagalkot taluk and 04 units are in Jamakhandi Taluk. |

HORTI 339 HGM 2025

(ಎಸ್.ಎಸ್.ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು